ಓ ಎಸ್ ನಂ.19/2024

ಪಿ.ಡಬ್ಲ್ಯೂ-1 ಜಿಲೇಕಾ ಗಂಡ ಅಬ್ದುಲ ಖರೀಮ ಪಟೇಲ

(ಇಂದು ದಿನಾಂಕಃ **09-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ ಎಸ್ ಹೆಚ್ ವಕೀಲರಿಂದ.</u>

ಗುರಣ್ಣಸಾಬರವರಿಗೆ ೧೪ ಎಕರೆ ೩ ಗುಂಟೆ ಮತ್ತು ದಸ್ತಗೀರಸಾಬರವರಿಗೆ ೧೪ ಎಕರೆ ೩ ಗುಂಟೆ ಜಮೀನು ಪಾಲಿಗೆ ಹೋಗಿದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ರಾಜಅಹಮದರವರು ೪ ಎಕರೆ ಜಮೀನು ಮಾರಾಟ ಮಾಡಿದ ಕುರಿತು ತೋರಿಸಲು ದಾಖಲೆ ಹಾಜರುಪಡಿಸಿರುತ್ತೇನೆ. ೮ ಎಕರೆ ಮತ್ತು ೪ ಎಕರೆ ೨ ಜಮೀನುಗಳನ್ನು ಜಾಫರಸಾಬ, ರಾಜಅಹಮದ ಮತ್ತು ದಸ್ತಗೀರ ಪಟೇಲರವರು ಮಾರಾಟ ಮಾಡಿರುತ್ತಾರೆ. ಆ ಕುರಿತು ದಾವೆಯಲ್ಲಿ ಮತ್ತು ನನ್ನ ಸಾಕ್ಷಿಯಲ್ಲಿ ಬರೆಸಿರುತ್ತೇನೆ. ನಾನು ಹೇಳಿದಂತೆ ಅವರು ಜಮೀನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ರಾಜಅಹಮದರವರು ಮೃತರಾದ ನಂತರ ಅವರ ಹೆಂಡತಿ ಮಕ್ಕಳ ಹೆಸರು ೭ ಎಕರೆ ೩೮ ಗುಂಟೆ ಜಮೀನು ಆಗಿತ್ತು ಎಂದರೆ ಸಾಕ್ಷಿಯು ೧೨ ಎಕರೆ ಮಾರಾಟ ಮಾಡಿದ ನಂತರ ಅವರ ಹೆಸರಿನಲ್ಲಿ ಅಷ್ಟು ಜಮೀನು ಹೇಗೆ ಬರುತ್ತದೆ ಎನ್ನುತ್ತಾರೆ.

೨. ೨೦೨೧ ರಲ್ಲಿ ಜಮೀನು ಅಳತೆ ಮಾಡುವ ಸಲುವಾಗಿ ನಮಗೂ ಕೂಡಾ ನೋಟಿಸು ನೀಡಲಾಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂಬರ ೧ ರ ಜಮೀನು ಒಟ್ಟು ೪೩ ಎಕರೆ ೨೬ ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ ೧ ರಲ್ಲಿ ಯಶೋದ, ಕಸ್ತೂರಿಬಾಯಿ, ಜಗದೀಶ, ವೈಜಿನಾಥ ಮತ್ತು ವಿಶ್ವನಾಥರವರ ಹೆಸರೂ ಕೂಡಾ ಇರುತ್ತದೆ ಎಂದರೆ ಸರಿ. ಎಸಿರವರ ನ್ಯಾಯಾಲಯದಲ್ಲಿ ನಾವೆಲ್ಲರು ಒಂದು ಕೇಸು ಮಾಡಿದ್ದೇವು

ಎಂದರೆ ಸರಿ. ಪ್ರತಿವಾದಿಗಳ ಹೆಸರಿನಲ್ಲಿರುವ ೨೦೧೬ ರ ಮುಟೇಷನ ರದ್ದು ಮಾಡುವಂತೆ ನಾವು ಕೇಳಿದ್ದೇವು ಎಂದರೆ ಸರಿ. ನಮಗೆ ಜಮೀನು ಕಡಿಮೆ ಆದ ವಿಚಾರ ನನ್ನ ಮದುವೆ ಆದಾಗಿನಿಂದ ಅಂದರೆ ಸುಮಾರು ೪೦ ವರ್ಷಗಳ ಹಿಂದೆ ಗೊತ್ತಾಗಿರುತ್ತದೆ. ನನ್ನ ಗಂಡ ಸದರಿ ವಿಚಾರದ ಕುರಿತು ಕಂದಾಯಾಧಿಕಾರಿಗಳಲ್ಲಿ ಪ್ರಶ್ನಿಸಿರುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

೩. ನನ್ನ ಗಂಡ ಜೀವಿತಾ ಇದ್ದಾಗ ಅವರು ಜಮೀನು ಕಡಿಮೆ ಆದ ವಿಚಾರವನ್ನು ಪ್ರಶ್ನೆ ಮಾಡುತ್ತಾ ಬಂದಿರುತ್ತಾರೆ. ನನ್ನ ಗಂಡ ಈಗ ಸುಮಾರು ೧೧ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ೧೧ ವರ್ಷಗಳು ನೀವು ಏಕೆ ಸುಮ್ಮನೆ ಇದ್ದೀರಿ ಎಂದರೆ ಸಾಕ್ಷಿಯು ನಾವು ಅಣ್ಣತಮ್ಮಂದಿರನ್ನು ಕರೆಯಿಸಿ, ನ್ಯಾಯ ಮಾಡಿದ್ದೇವು ಅವರು ಕೊಡದ ಕಾರಣ ದಾವೆ ಹಾಕಿರುತ್ತೇವೆ ಎನ್ನುತ್ತಾರೆ. ಸದರಿ ವಿಚಾರಗಳನ್ನು ನನ್ನ ದಾವೆಯಲ್ಲಿ ಬರೆಸಿರುತ್ತೇನೆ. ಪ್ರತಿವಾದಿಯರ ಹೆಸರಿನಲ್ಲಿ ೭ ಎಕರೆ ೩೮ ಗುಂಟೆ ಜಮೀನಿಗೆ ನಮೂನೆ-೧೦ ರ ದಾಖಲೆ ಇರುತ್ತದೆ ಎಂದರೆ ಸಾಕ್ಷಿಯು ಅವರು ಆ ರೀತಿ ಮಾಡಿಕೊಂಡರೆ ಏನು ಮಾಡುವುದು ಎನ್ನುತ್ತಾರೆ.

೪. ೨ ಎಕರೆ ೭ ಗುಂಟೆ ಜಮೀನು ನಮಗೆ ಇರುತ್ತದೆ. ಆದರೆ ಪಹಣಿಯಲ್ಲಿ ಮಾತ್ರ ಅದು ಕಡಿಮೆ ಆಗಿರುತ್ತದೆ. ನಮ್ಮ ಜಮೀನು ಅಳತೆ ಮಾಡಿರುತ್ತೇವೆ ಅದು ಸರಿ ಇರುತ್ತದೆ, ಕೇವಲ ಪಹಣಿಯಲ್ಲಿ ಕಡಿಮೆ ಇರುತ್ತದೆ. ನಮ್ಮ ಹಿಸ್ಸೆ ಮತ್ತು ದಸ್ತಗೀರಸಾಬರವರ ಜಮೀನಿನ ಹಿಸ್ಸೆ ಬೇರೆ-ಬೇರೆ ಇರುತ್ತವೆ ಎಂದರೆ ಸರಿಯಲ್ಲ. ನಮ್ಮ ಹೆಸರಿನಲ್ಲಿ ೧೦ ಎಕರೆ ೫ ಗುಂಟೆ ಜಮೀನು ಇರುವ ಕುರಿತು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಾನು ಹೇಳಿದಂತೆ ಆ ರೀತಿ ಯಾವುದೆ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

೫. ಗುರಣ್ಣಸಾಬ ನನ್ನ ಮಾವನಾಗಿರುತ್ತಾರೆ. ಅವರಿಗೆ ೧೪ ಎಕರೆ ೩ ಗುಂಟೆ ಜಮೀನು ನನ್ನ ಮದುವೆ ಆಗುವ ಮೊದಲು ಪಾಲಿನಲ್ಲಿ ಬಂದಿರುತ್ತದೆ. ನನ್ನಮಾವ ಮತ್ತು ನನ್ನ ಮೈದುನನ ಹೆಸರಿನಲ್ಲಿ ಯಾವಾಗ ಜಮೀನು ಆಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ಗುರಣ್ಣಸಾಬ ತಮಗೆ ಬಂದ ಜಮೀನಿನಲ್ಲಿ ೪ ಎಕರೆ ಮಾರಾಟ ಮಾಡಿದ್ದರು. ಸುಮಾರು ೩೫ ವರ್ಷಗಳ ಹಿಂದೆ ೧೦ ಎಕರೆ ೩ ಗುಂಟೆ ಜಮೀನು ನನ್ನ ಮಾವ ತೀರಿದ ನಂತರ ನನ್ನ ಗಂಡ ಮತ್ತು ನನ್ನ ನೆಗೆಣ್ಣಿಯ ಹೆಸರಿನಲ್ಲಿ ಆಗಿರುತ್ತದೆ. ಸರ್ವೆ ನಂಬರ ೧ ನ್ನು ಪೂರ್ತಿ ಅಳತೆ ಮಾಡಿದರೆ ಮಾತ್ರ ನಮ್ಮ ಜಮೀನಿನ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಜಾಫರಸಾಬ ೫ ಎಕರೆ ಮಾರಾಟ ಮಾಡಿರುತ್ತಾರೆ ಮತ್ತು ದಸ್ತಗೀರಸಾಬ ೫ ಎಕರೆ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ವಿಚಾರಗಳನ್ನು ದಾವೆಯಲ್ಲಿ ತಿಳಿಸಿರುತ್ತೇನೆ. ಎಸಿ ರವರ ನ್ಯಾಯಾಲಯದಲ್ಲಿ ಹಾಕಿದ ಕೇಸಿನಲ್ಲಿ ೨೦೨೩ ರಲ್ಲಿ ನಮಗೆ ವಿಚಾರ ಗೊತ್ತಾಗಿರುತ್ತದೆ ಎಂದು ಬರೆಸಿರುತ್ತೇವೆ ಎಂದರೆ ಸರಿ. ದಸ್ತಗೀರಸಾಬರವರ ಆಸ್ತಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.